**<u>ದಿನಾಂಕಃ 15.02.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರಿದ ಪಾಟೀ ಸವಾಲು : 1ನೇ ಪ್ರತಿವಾದಿ ಪರ ಶ್ರೀ. ಎ.ಸಿ.ಸಿ ವಕೀಲರಿಂದಃ</u>**

1) ನನ್ನ ಅಜ್ಜಿ ಕಾಡಮ್ಮನಿಗೆ ಸೇರಿದ ಮರಣ ಪ್ರಮಾಣ ಪತ್ರವನ್ನು ನಾನು ಹಾಜರುಪಡಿಸಿರುವುದಿಲ್ಲ. ನನ್ನ ಅಜ್ಜಿ ಮೃತ ಪಟ್ಟು 60 ಕಳೆದವು. ನನ್ನ ಅಜ್ಜಿ ಕಾಡಮ್ಮನವರಿಗೆ ಇಬ್ಬರು ಮಕ್ಕಳು ಅವರೆಂದರೆ ದಾಸೇಗೌಡ, ಮುದ್ದ ಹನುಮೇಗೌಡ. ನನ್ನ ವಾದ ಪತ್ರದಲ್ಲಿ ಕಾಡಮ್ಮನಿಗೆ ದಾಸೇಗೌಡ ಎಂಬ ಒಬ್ಬನೇ ಮಗ ಇರುವುದಾಗಿ ನಮೂದಿಸಿರುವ ಸಂಗತಿ ತಪ್ಪಾಗಿರುತ್ತದೆ. ಮುದ್ದ ಹನುಮೇಗೌಡರಿಗೆ ಇಬ್ಬರು ಹೆಣ್ಣು ಮಕ್ಕಳು ಮತ್ತು ಇಬ್ಬರು ಗಂಡು ಮಕ್ಕಳು ಇರುತ್ತಾರೆ. ಮುದ್ದ ಹನುಮೇಗೌಡರವರ ಮಕ್ಕಳು ಮೃತಪಟ್ಟಿದ್ದು, ಅವರ ಮೊಮ್ಮಕ್ಕಳು ಜೀವಂತ ಇರುತ್ತಾರೆ. ಮುದ್ದ ಹನುಮೇಗೌಡರ ಮೊಮ್ಮಕ್ಕಳನ್ನು ಈ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಸೇರಿಸಿರುವುದಿಲ್ಲ ಎಂದರೆ ಸರಿ. ಪಹಣಿ ಪತ್ರಿಕೆಯಲ್ಲಿ ಒಟ್ಟು 12 ಕಾಲಂಗಳು ಇರುತ್ತದೆ ಎಂದರೆ ಸರಿ. ಜಮೀನಿನಲ್ಲಿ ಯಾರು ಅನುಭವದಲ್ಲಿ ಇರುತ್ತಾರೋ ಅವರ ಹೆಸರನ್ನು ಪಹಣಿ ಪತ್ರಿಕೆಯ 12ನೇ ಕಾಲಂನಲ್ಲಿ ನಮೂದು ಮಾಡುತ್ತಾರೆ ಎಂದರೆ ಸರಿ. ಕಾಡಮ್ಮನ ವಂಶವೃಕ್ಷದ ಬಗ್ಗೆ ನಾನು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಅಂತಹ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಈ ಹಿಂದೆ ನನ್ನ ಅಜ್ಜಿ, ನಂತರ ನನ್ನ ತಂದೆ ಮತ್ತು ಪ್ರಸ್ತುತ ನಾನು ಸ್ವಾಧೀನದಲ್ಲಿ ಇರುತ್ತೇವೆ ಎಂದು ತೋರಿಸಲು ಯಾವುದೇ ದಾಖಲೆಗಳನ್ನು ನಾನು ಹಾಜರುಪಡಿಸಿರುವುದಿಲ್ಲ.

2) ದಿಃ03.03.2004 1ನೇ ಪ್ರತಿವಾದಿ ಮತ್ತು ಆತನ ಕುಟುಂಬದವರು ನೋಂದಾಯಿತಿ ವಿಭಾಗ ಪತ್ರದ ಮೂಲಕ ಕುಟುಂಬದ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿರುವ ಬಗ್ಗೆ ನನಗೆ ಗೊತ್ತಿಲ್ಲ. ಈ ಪ್ರಕರಣದಲ್ಲಿ ಪ್ರತಿವಾದಿ ಸಲ್ಲಿಸಿರುವ ಪ್ರತಿವಾದ ಪತ್ರದ ಸಂಗತಿಗಳ ಬಗ್ಗೆ ನನಗೆ ಗೊತ್ತಿಲ್ಲ. ಸರ್ವೆ ನಂ.25ರ ಪಕ್ಕದಲ್ಲಿ ಸರ್ವೆ ನಂ.26 ಮತ್ತು 27ರ ಜಮೀನುಗಳು ಇವೆ ಎಂದರೆ ಸರಿ. ಸರ್ವೆ ನಂ.25/2 ರಲ್ಲಿ 28 ಗುಂಟೆ, ಸರ್ವೆ ನಂ. 26/3 ರಲ್ಲಿ 3 ಗುಂಟೆ, ಸರ್ವೆ ನಂ.27/2 ರಲ್ಲಿ 11 ಗುಂಟೆ ಜಮೀನುಗಳು ದಿಃ03.03.2004 ರ ವಿಭಾಗ ಮೂಲಕ 1ನೇ ಪ್ರತಿವಾದಿಯ

ಭಾಗಕ್ಕೆ ಬಂದಿದೆ ಎಂದರೆ ಸರಿಯಲ್ಲ. ದಾವಾ ಸ್ವತ್ತು 1ನೇ ಪ್ರತಿವಾದಿಯ ಸ್ವಾದೀನದಲ್ಲಿ ಇದೆ ಎಂದರೆ ಸಾಕ್ಷಿಯು ಆತ ಮೃತಪಟ್ಟಿರುವುದಾಗಿ ನುಡಿಯುತ್ತಾರೆ.

3) ನೀವು ಹೇಳಿದಂತೆ ಈ ಮೊದಲಿನಿಂದಲೂ ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇದ್ದಿದ್ದರೆ ಈ ಹಿಂದೆಯೇ ಆ ಸ್ವತ್ತಿನ ಖಾತೆಯನ್ನು ನಿಮ್ಮ ಹೆಸರಿಗೆ ಇರುತ್ತಿತು ಎಂದರೆ ಸಾಕ್ಷಿಯು ಆ ರೀತಿ ಖಾತೆ ಇರುವುದಾಗಿ ನುಡಿಯುತ್ತಾರೆ. ಸದರಿ ದಾಖಲಾತಿಯನ್ನು ನಾನು ಹಾಜರುಪಡಿಸುತ್ತೇನೆ.

4) ದಾವಾ ಸ್ವತ್ತಿನ ಖಾತೆಯನ್ನು ನಾನು ಯಾವತ್ತು ಕಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಕಂದಾಯ ಪಾವತಿ ಮಾಡಿದ ಬಗ್ಗೆ ರಶೀದಿಗಳನ್ನು ನಾನು ಹಾಜರುಪಡಿಸಿರುವುದಿಲ್ಲ. ಕಾಡಮ್ಮನ ಇನ್ನೊಬ್ಬ ಮಗ ಮುದ್ದಹನುಮೇಗೌಡ ಮತ್ತು ಆತನ ಕುಟುಂಬದವರು ಹಾಗೂ ನನ್ನ ಸಹೋದರ ಸಹೋದರಿಯರು ಈ ಪ್ರಕರಣವನ್ನು ನಡೆಸಲು ನನಗೆ ಯಾರು ಸಹ ಯಾವುದೇ ಅಧಿಕಾರವನ್ನು ನೀಡಿರುವುದಿಲ್ಲ. ದಾವಾ ಸ್ವತ್ತು 1ನೇ ಪ್ರತಿವಾದಿಗೆ ಸೇರಿದ್ದು, ಆತ 1971ರಿಂದ ಈಗಲೂ ಸಹ ಆ ಸ್ವತ್ತಿನ ಸ್ವಾಧೀನವನ್ನು ಹೊಂದಿ, ಕಂದಾಯ ಪಾವತಿಸುತ್ತಾ, ಅನುಭೋಗಿಸುತ್ತಿದ್ದಾರೆ ಎಂದರೆ ಸರಿಯಲ್ಲ. ಆತ 1971ರಿಂದ ಆ ಸ್ವತ್ತಿನ ಸ್ವಾಧೀನ ಹೊಂದಿರುವ ಕಾರಣ ಪಹಣಿ ಪತ್ರಿಕೆಗಳಲ್ಲಿ ಆತನ ಹೆಸರು ದಾಖಲಾಗಿದೆ ಎಂದರೆ ಸರಿಯಲ್ಲ.

5) ದಾವಾ ಸ್ವತ್ತಿಗೆ ಸಂಬಂದಿಸಿದಂತೆ ನಮಗೆ ಯಾವುದೇ ಯಾವುದೇ ದಾಖಲಾತಿಯನ್ನು ಹಾಜರುಪಡಿಸದೇ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಈ ದಾವೆಯನ್ನು ಹೂಡುವ ಪೂರ್ವದಲ್ಲಿ ವಾದ ಪತ್ರಕ್ಕೆ ಮಾಹಿತಿಯನ್ನು ನಾನು ಮತ್ತು ನನ್ನ ಸಹೋದರರು ನೀಡಿರುತ್ತೇವೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆದಿರುವ ಸಂಗತಿಗಳ ಬಗ್ಗೆ ಈಗ ನನಗೆ ನೆನಪಿಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರಕ್ಕೆ ಮಾಹಿತಿಯನ್ನು ನಾನು ಮತ್ತು ನನ್ನ ಸಹೋದರರು ನೀಡಿರುತ್ತೇವೆ. ನನ್ನ ಅನುಕೂಲಕ್ಕೆ ತಕ್ಕಂತೆ ಪ್ರಕರಣವನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು).**

ಓ. ಹೆ. ಕೇ. ಸರಿ ಇದೆ.

**ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ
ನ್ಯಾಯಾಲಯ, ಚನ್ನಪಟ್ಟಣ.**